**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ,**
**ಸಿರುಗುಪ್ಪ**

**ಸಿ.ಸಿ.ಸಂಖ್ಯೆಃ 283/2024**

**ಫಿರ್ಯಾದುದಾರರು ಃ** ಕೆ.ನಾಗರಾಜನ್

**- ವಿರುದ್ಧ -**

**ಆರೋಪಿ ಃ** ರಾಮಕೋಟೇಶ್ವರ ರಾವ್

**ಃ ಆ ಪಾ ದ ನೆ ಃ**

**ಶ್ರೀ ಹಾಜಿಹುಸೇನಸಾಬ ಯಾದವಾಡ, ಬಿ.ಕಾಂ, ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಿರುಗುಪ್ಪ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ.**

* * *

ಆಪಾದಿತರಾದ ನೀವು ಮತ್ತು ಫಿರ್ಯಾದುದಾರರು ಪರಿಚಯಸ್ಥರಾಗಿದ್ದು, ಅವರ ಬಳಿ ದಿಃ 03-08-2023 ರಂದು ನಿಮ್ಮ ಕುಟುಂಬದ ಹಾಗೂ ವ್ಯವಹಾರದ ಅವಶ್ಯಕತೆಗಳಿಗೋಸ್ಕರ ರೂ.18,60,000/- (ಹದಿನೆಂಟು ಲಕ್ಷದ ಅರವತ್ತು ಸಾವಿರ ರೂಪಾಯಿಗಳು) ಹಣವನ್ನು ಸಾಲವಾಗಿ ಪಡೆದಿದ್ದು, ನಂತರ ಮರುಪಾವತಿಸುವುದಾಗಿ ಹೇಳಿರುತ್ತೀರಿ. ಸದರಿ ಹಣದ ಮರುಪಾವತಿಗಾಗಿ ನೀವು ಫಿರ್ಯಾದುದಾರರಿಗೆ 13-09-2023 ರ ದಿನಾಂಕ ನಮೂದಿಸಿದ ಸುಖೋ ಬ್ಯಾಂಕ್, ಸಿಂಧನೂರು ಶಾಖೆಯ ಚೆಕ್ ಸಂಖ್ಯೆಃ 002158 ನ್ನು ನೀಡಿದ್ದು, ನಂತರ ನಿಮ್ಮ ಆಶ್ವಾಸನೆಯಂತೆ ಫಿರ್ಯಾದುದಾರರು ಚೆಕ್ ನಗದೀಕರಣಕ್ಕಾಗಿ ದಿಃ 13.09.2023 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಿರುಗುಪ್ಪ ಶಾಖೆಯಲ್ಲಿರುವ ತಮ್ಮ ಖಾತೆಯ ಮೂಲಕ ಚೆಕ್ಕನ್ನು ಸಲ್ಲಿಸಿದಾಗ ನಿಮ್ಮ ಖಾತೆಯಲ್ಲಿ "Insufficient Funds" ಎಂಬ ಹಿಂಬರಹದೊಂದಿಗೆ ದಿಃ 26.10.2023 ರಂದು ಸದರಿ ಚೆಕ್ಕು ವಾಪಸ್ಸಾಗಿರುತ್ತದೆ. ನಂತರ ಸದರಿ ವಿಚಾರದಲ್ಲಿ ಫಿರ್ಯಾದುದಾರರು ಆಪಾದಿತರಾದ ನಿಮಗೆ ದಿಃ 25.11.2023 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸ್ ಕಳುಹಿಸಿದ್ದು, ಅದು ನಿಮಗೆ ಜಾರಿಯಾಗಿದ್ದರೂ ಸಹಾ ಆಪಾದಿತರಾದ ನೀವು ಹಣವನ್ನು ಕೊಟ್ಟಿರುವುದಿಲ್ಲ ಮತ್ತು ಸದರಿ

ನೊಟೀಸ್‌ಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಕಲಂ 138 ವರ್ಗಾವಣೀಯ ಲಿಖಿತಗಳ ಅಧಿನಿಯಮ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ._

**ಪ್ರಶ್ನೆಃ- 1 ಃ ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೇ?**
**ಉತ್ತರಃ**

**ಪ್ರಶ್ನೆಃ- 2 ಃ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪರ ಪ್ರತಿರಕ್ಷಣೆ ಇದೆಯೇ?**
**ಉತ್ತರಃ**

**ದಿನಾಂಕಃ 02.08.2024 ರಂದು ಆರೋಪಿಗೆ ಆಪಾದನೆ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಆಕೆಯು ಕೊಟ್ಟ ಹೇಳಿಕೆಯನ್ನು ನನ್ನ ಸಮಕ್ಷಮ ಬರೆದುಕೊಂಡು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ.**

**(ಹಾಜಿಹುಸೇನಸಾಬ ಯಾದವಾಡ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಸಿರುಗುಪ್ಪ